> ದೇವಸ್ಥಾನದಲ್ಲಿ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದ್ದಾರೆ. ಎಲ್ಲೂ ಅಸುರಕ್ಷತೆಯ ಭಾವನೆ ಬಂದಿಲ್ಲ. ಸ್ಯಾನಿಟೈಸರ್ ಬಳಕೆ, ವ್ಯಕ್ತಿಗತ ಅಂತರ ಕಾಪಾಡಲಾಗುತ್ತಿದೆ.
>
> -ಎ.ಎಸ್. ಆನಂದ,
> ಪ್ರವಾಸಿ





ಗೋಕರ್ಣದ ಓಂ ಬೀಚ್

ತೆರೆದಿದ್ದರೂ ಕೊರೊನಾಕ್ಕೂ ಹಿಂದೆ ಇದ್ದ ರೀತಿಯಲ್ಲಿ ಭಕ್ತರಿಗೆ ಪ್ರವೇಶ ಸಿಕ್ಕಿಲ್ಲ. ಧಾರ್ಮಿಕ ಕ್ಷೇತ್ರಗಳಲ್ಲೂ ಸ್ಯಾನಿಟೈಸರ್, ಮುಖಗವುಸು ಬಳಕೆ ಕಡ್ಡಾಯವಿದೆ.

'ದೇವಸ್ಥಾನದಲ್ಲಿ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದ್ದಾರೆ. ಎಲ್ಲೂ ಅಸುರಕ್ಷತೆಯ ಭಾವನೆ ಬಂದಿಲ್ಲ. ಸ್ಯಾನಿಟೈಸರ್ ಬಳಸಿ ಕೈ ಸ್ವಚ್ಛಗೊಳಿಸುವುದು, ಥರ್ಮಲ್ ಸ್ಕ್ಯಾನರ್‌ನಿಂದ ದೇಹದ ಉಷ್ಣಾಂಶವನ್ನು ಪರೀಕ್ಷಿಸುತ್ತಾರೆ. ನಾವು ಕುಟುಂಬದ ಸಮೇತ ಬಂದಿದ್ದೇವೆ' ಎಂದು ಬೆಂಗಳೂರಿನಿಂದ ಗೋಕರ್ಣಕ್ಕೆ ಬಂದಿದ್ದ ಎ.ಎಸ್. ಆನಂದ 'ಸುಧಾ' ಪ್ರತಿನಿಧಿಗೆ ತಿಳಿಸಿದರು.

## ಕಡಲತೀರಗಳಲ್ಲಿ ಎಚ್ಚರ

ಈಗ ಮಳೆಗಾಲವಾಗಿರುವ ಕಾರಣ ಉತ್ತರ ಕನ್ನಡದ ಕಡಲತೀರಗಳು ಅಷ್ಟಾಗಿ ಸುರಕ್ಷಿತವಾಗಿಲ್ಲ. ಕಡಲಿಗಿಳಿದ ಪ್ರವಾಸಿಗರಿಗೆ ಸೂಚನೆ ನೀಡುತ್ತಿದ್ದ, ಮುಳುಗುತ್ತಿದ್ದ ಪ್ರವಾಸಿಗರ ರಕ್ಷಣೆಗೆ ಧಾವಿಸುತ್ತಿದ್ದ 'ಜೀವರಕ್ಷಕ'ರ ನೇಮಕ ಇನ್ನೂ ಆಗಿಲ್ಲ. ಹಾಗಾಗಿ ಅಬ್ಬರದ ಅಲೆಗಳಿಗೆ ಸಿಲುಕಿದರೆ ಅಪಾಯ ಉಂಟಾಗುವ ಸಾಧ್ಯತೆಯಿದೆ.

## ಭಕ್ತರ ದಾರಿ ಕಾಯುವ ದೇವರು!

ಕರ್ನಾಟಕದ ಕರಾವಳಿ ದೇವಸ್ಥಾನಗಳಿಗೆ ಹೆಚ್ಚು ಪ್ರಸಿದ್ಧಿ. ಜಾತ್ರೆಗಳ ಸಂಭ್ರಮ, ನವರಾತ್ರಿಯ ವೈಭವ, ತೆನೆಹಬ್ಬದ ಶ್ರದ್ಧೆ ಮತ್ತು ದೈವಾರಾಧನೆಯ ಧ್ವನಿಯೊಂದಿಗೆ ವರ್ಷವಿಡೀ ವೈಭವವನ್ನೇ ಉಸಿರಾಡುವ ಕರಾವಳಿಯಲ್ಲಿ 'ಕೋವಿಡ್ 19' ಕಾರಣಕ್ಕೆ ಕಳೆದ ಆರೇಳು ತಿಂಗಳಿಂದ ಕವಿದಿದ್ದ ಮೌನ ಈಗ ನಿಧಾನಕ್ಕೆ ಕದಡುತ್ತಿದೆ.

ದೇವಸ್ಥಾನಗಳನ್ನು ಹೊರತುಪಡಿಸಿದರೆ, ಬೀಚ್‌ಗಳಲ್ಲಾದರೂ ಜನರ ಓಡಾಟವಿದೆಯೇ ಎಂದು ಗಮನಿಸಿದರೆ, ಅಲ್ಲೂ ಹೆಚ್ಚು ಖುಷಿಯಿಲ್ಲ. ಕೋವಿಡ್ ಸೋಂಕಿನ ದೆಸೆಯಿಂದ ಲಾಕ್‌ಡೌನ್ ತುಸು ಹೆಚ್ಚೇ ಬಿಗುವಾಗಿದ್ದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಸಿದ್ಧ ದೇವಸ್ಥಾನಗಳಿಗೆ ಬರುವ ಭಕ್ತರ ಸಂಖ್ಯೆ ತೀರಾ ಕಡಿಮೆ ಆಗಿತ್ತು. ಆದರೆ ಜೂನ್ 1ರ ನಂತರ ಜಾರಿಯಾದ ಅನ್‌ಲಾಕ್ ನಿಯಮಗಳನ್ನು ಅನುಸರಿಸಿ, ದೇವಸ್ಥಾನಗಳಲ್ಲಿ ದೇವರ ದರ್ಶನಕ್ಕೆ ಅವಕಾಶ ನೀಡಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸ್ವಚ್ಛತೆಯ ಎಲ್ಲ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡು ಭಕ್ತರಿಗೆ ದೇವರ ದರ್ಶನದ ಅವಕಾಶವನ್ನು ಕಲ್ಪಿಸಲಾಗುತ್ತಿದೆ. ಆದರೆ ದಿನಕ್ಕೆ 80ಕ್ಕೂ ಹೆಚ್ಚು ಸರ್ಪ ಸಂಸ್ಕಾರ, ಎರಡು ಹಂತದಲ್ಲಿ ನಡೆಯುತ್ತಿದ್ದ ಆಶ್ಲೇಷಾ ಬಲಿ ಮತ್ತು ಇತರ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ. ಸರ್ಪ ಸಂಸ್ಕಾರ ಮತ್ತು ಇತರ ಸೇವೆಗಳಿಗೆ ದಿನ ನಿಗದಿ ಮಾಡಿ, ಮುಂಗಡ ಹಣ ಪಾವತಿಸಿದವರ ಪೈಕಿ ಕೆಲವರಿಗೆ ಆನ್‌ಲೈನ್‌ನಲ್ಲಿ ಹಣವನ್ನು ಮರುಪಾವತಿಸಲಾಗಿದೆ. ಮತ್ತೆ ಕೆಲವರು ಪರಿಸ್ಥಿತಿ ಸರಿಯಾದ ಬಳಿಕವೇ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಮನವಿ ಮಾಡಿಕೊಂಡಿದ್ದಾರೆ ಎಂದು ದೇವಸ್ಥಾನದ ಕಾರ್ಯನಿರ್ವಹಣಾ ಅಧಿಕಾರಿ ರವೀಂದ್ರ ಮಾಹಿತಿ ನೀಡಿದರು.

ಈಗಲೂ ಕುಕ್ಕೆ ದೇವಸ್ಥಾನಕ್ಕೆ ದಿನಕ್ಕೆ ಸುಮಾರು ಎರಡು ಸಾವಿರ ಭಕ್ತರು ಭೇಟಿ ಕೊಡುತ್ತಿದ್ದಾರೆ. ಅವರಿಗೆ ತೀರ್ಥ ಪ್ರಸಾದವಾಗಲೀ, ಲಡ್ಡು ಮುಂತಾದ ಯಾವುದೇ ಪ್ರಸಾದವಾಗಲೀ ಕೊಡುವ ಅವಕಾಶ ಇಲ್ಲ. ಕೈಗೆ ಸ್ಯಾನಿಟೈಸರ್ ಹಾಕುವಂತೆ ಸೂಚಿಸಿ, ಪ್ರತಿಯೊಬ್ಬರ ದೇಹದ ತಾಪಮಾನ ಪರಿಶೀಲನೆ ಮಾಡಿದ ಬಳಿಕ ದೇವಸ್ಥಾನದೊಳಗೆ ಬಿಡಲಾಗುತ್ತಿದೆ. ದೇವಸ್ಥಾನದೊಳಗೂ ಭಕ್ತರು ದೇವರ ದರ್ಶನ ಪಡೆದು, ಪ್ರದಕ್ಷಿಣೆ ಹಾಕಿ ಸೀದಾ ಹೊರಗೆ ಬರಬೇಕು. ಎಲ್ಲಿಯೂ ಕುಳಿತುಕೊಳ್ಳುವಂತಿಲ್ಲ. ದೇವಸ್ಥಾನದ ವಸತಿ ಗೃಹಗಳಲ್ಲಿ ಭಕ್ತರಿಗೆ ಉಳಿದುಕೊಳ್ಳುವ ಅವಕಾಶ ನೀಡಿಲ್ಲ. ಖಾಸಗಿ ವಸತಿ ಗೃಹಗಳು ದೂರದ ಊರುಗಳಿಂದ ಬರುವ ಭಕ್ತರಿಗೆ ವಿಶ್ರಾಂತಿಯ ಅವಕಾಶ ಕಲ್ಪಿಸಿವೆ.

ಧರ್ಮಸ್ಥಳದಲ್ಲಿಯೂ ಇದೇ ಮಾದರಿಯನ್ನು ಅನುಸರಿಸಿ ಭಕ್ತರಿಗೆ ದರ್ಶನದ ಅವಕಾಶ ಕಲ್ಪಿಸಲಾಗಿದೆ. ಸ್ಯಾನಿಟೈಸ್‌ಗೆ ಹೆಚ್ಚು ಆದ್ಯತೆ ನೀಡಿ ಭಕ್ತರನ್ನು ದೇವಸ್ಥಾನದೊಳಗೆ ಬಿಡಲಾಗುತ್ತದೆ. ದೇವಸ್ಥಾನದಲ್ಲಿ ಅನ್ನದಾನದ ಪರಂಪರೆಗೆ ಚ್ಯುತಿ ಬರಬಾರದು ಎಂಬ ಕಾರಣಕ್ಕೆ ಭಕ್ತರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಬಹಳ ದೂರದಿಂದ ಬರುವ ಭಕ್ತರಿಗೆ ಊಟದ ಅವಶ್ಯಕತೆ ಇರುತ್ತದೆ. ಆದ್ದರಿಂದ ಸ್ವಚ್ಛತೆಗೆ ಆದ್ಯತೆ ನೀಡಿ ಮಧ್ಯಾಹ್ನ ಊಟದ ಪ್ರಸಾದ ನೀಡಲಾಗುತ್ತಿದೆ. ಪದೇಪದೇ ಸ್ಯಾನಿಟೈಸ್ ಮಾಡುವುದು, ಬಿಸಿನೀರು



ಕೊಡಗಿನಲ್ಲಿ ಸುರಿದಿರುವ ಮಳೆಗೆ ಜಲಪಾತಗಳ ಸಂಭ್ರಮ. ಮಡಿಕೇರಿಯಿಂದ ಸಿದ್ದಾಪುರಕ್ಕೆ ತೆರಳುವ ಮಾರ್ಗದಲ್ಲಿನ ಬ್ಯಾಲ ಜಲಪಾತ ಪ್ರವಾಸಿಗರ ನಲ್ದಾಣಗಳಲ್ಲಿ ಒಂದಾಗಿದೆ.